Rotary Puttur City

2023-24

ರೋಟ ವಿಕಾಸ

# ROTA VIKASA

Weekly News Bulletin of Rotary Club Puttur City RI Dist. 3181 Zone IV

CREATE HOPE in the WORLD

CHARTER NO. 63075 • CHARTER DATE : 6-8-2003

President
Rtn. PHF. Gracy Gonsalves
Cell : 94488 12159
Secretary
Rtn. Shyamala Shetty
Cell : 7338161567
IPP
Rtn. Prashanth Shenoy
Vice President
Rtn. Jabbar K. M.
Treasurer
Rtn. Mohan Mutlaje
Sergeant at Arms
Rtn. Krishnaveni Rai
DIRECTORS
Club Service
Rtn. Swathi Mallara
Vocational Service
Rtn. Dennis Mascarenhas
Community Service
Rtn. Dr. Shashidhar Kaje
International Service
Rtn. Mohammed Saheb
Youth Service
Rtn. Prakash V. K.
CHAIRMEN
The Rotary Foundation
Rtn. Surendra Kini
C.L.C.C.
Rtn. Krishnamohan P. S.
Pulse Polio
Rtn. Dr Harikrishna Panaje
TEACH
Rtn. Podiya DR
Membership Development
Rtn. Padmanabha Shetty
WinS
Rtn. Pressi Pais
Ethics
Rtn. John Cutinha
Water and Sanitation
Rtn. Umeshchandra
Dist. Project
Rtn. Jayakumar Rai
Sports
Rtn. Lokesh & Mahalaxmi K.
Fellowship
Rtn. Victor Martis
Website
Rtn. Pramod Mallara
Rotaract
Rtn. PHF. Dharnappa Gowda
Interact
Rtn. Jeromias Pais
Bulletin Editor
Rtn. Manohar Kolakimar
9448328237

**VOLUME - 21 | ISSUE - 4 | DATE - 01-08-2023**

## AUGUST MONTH in Rotary
## "MEMBERSHIP AND NEW CLUB DEVELOPMENT"

### Reasons to Join Rotary

**1. FRIENDSHIP :** In an increasingly complex world, Rotary provides one of the most basic human needs: the need for friends and fellowship. It is one of the two reasons why; Rotary began in 1905.

**2. BUSINESS DEVELOPMENT :** The second original reason for Rotary's beginning. Everyone needs to network. Rotary consists of a cross section of every business community. Its members come from all walks of life. Rotarians help one another and collectively help others.

**3. PERSONAL GROWTH AND DEVELOPMENT :** Membership in Rotary continues one's growth and education in human relations and personal development.

**4. LEADERSHIP DEVELOPMENT :** Rotary is an organization of leaders and successful people. Serving in Rotary positions is like a college education in Leadership: learning how to motivate, influence, and lead leaders.

**5. CITIZENSHIP IN THE COMMUNITY :** Membership in a Rotary club makes one a better community citizen. The average Rotary club consists of the most active citizens in any community.

**6. CONTINUING EDUCATION :** Each week at Rotary there is a program designed to keep one informed as to what is going on in the community, nation, and world. Different speakers, different topics.

**7. FUN :** Rotary is fun. A lot of fun. Each meeting is fun. The club projects are fun. Social activities are fun. And the service is fun.

**8. PUBLIC SPEAKING SKILLS :** Many an individual who joined Rotary was afraid to speak in public. Rotary develops confidence and skill in public communication, and plenty of opportunities to speak!

**9. CITIZENSHIP IN THE WORLD :** Every Rotarian wears a pin that says: "Rotary International". And every Rotarian is welcome – even encouraged – to attend at over 29,000 clubs in 163 nations and other geographical regions [now over 33,000 clubs in over 200 countries and geographical areas]. There are few places on the globe that do not have a Rotary club. Instant friends in both one's community, and in the world community.

**10. ASSISTANCE WHEN TRAVELING :** Because there are Rotary clubs everywhere, many a Rotarian who has needed a doctor, lawyer, hotel, dentist, advice, etc., while traveling has found assistance through Rotary.

---

## ವಾರದ ಸಭೆಯ ವರದಿ

ಕ್ಲಬ್ ಸಾರ್ಜಂಟ್ ಅಟ್ ಆರ್ಮ್ಸ್ ರೊ। ಕೃಷ್ಣವೇಣಿ ರೈಯವರು ಕ್ಲಬ್ ಅಧ್ಯಕ್ಷೆ ರೊ। ಗ್ರೇಸಿ ಗೋನ್ಸಾಲ್ವೀಸ್‌ರವರಿಗೆ ಕೊರಳಪಟ್ಟಿ ತೊಡಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು. ರೊ। ಕಾರ್ತಿಕ್‌ರವರು ಪ್ರಾರ್ಥನೆಯನ್ನು ಹಾಡಿದರು. ಸಭಾಧ್ಯಕ್ಷತೆಯನ್ನು ವಹಿಸಿದ ರೊ। ಗ್ರೇಸಿ ಗೋನ್ಸಾಲ್ವೀಸ್‌ರವರು ಮುಖ್ಯ ಅತಿಥಿಯಾಗಿ ಆಗಮಿಸಿದ Paul Harris Society Dist. Chairman, Past President & Past AG ರೊ। ಸುರೇಂದ್ರ ಕಿಣಿಯವರನ್ನು ಮತ್ತು ಬಂದಂತಹ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು. ಕ್ಲಬ್‌ನ ಕಾರ್ಯದರ್ಶಿ ಶ್ರೀಮತಿ ಶ್ಯಾಮಲಾ ಶೆಟ್ಟಿರವರು ವಾರದ ವರದಿ ಮಂಡಿಸಿದರು. ವೇದಿಕೆಯಲ್ಲಿ IPP ರೊ। ಪ್ರಶಾಂತ್ ಶೆಣೈ ಉಪಸ್ಥಿತರಿದ್ದರು.




ಮುಖ್ಯ ಅತಿಥಿಯಾಗಿ ಆಗಮಿಸಿದ ರೊ। ಸುರೇಂದ್ರ ಕಿಣಿಯವರು ಎಲ್ಲಾ ಹೊಸ ಸದಸ್ಯರಿಗೆ ಕ್ಲಬ್‌ನ ಸದಸ್ಯತ್ವದ ಬಗ್ಗೆ, ಶಿಸ್ತಿನ ಬಗ್ಗೆ ಹಾಗೂ ಕ್ಲಬ್ ನಿಯಮಗಳ ಬಗ್ಗೆ ಮಾರ್ಗದರ್ಶನ ನೀಡಿದರು.

ಕೊನೆಯದಾಗಿ ರೊ। ಪ್ರಮೋದ್ ಮಲ್ಲಾರರವರಿಂದ ವಂದನಾರ್ಪಣೆಯ ನಂತರ ಅಧ್ಯಕ್ಷರು ಮುಂದಿನ ವಾರಕ್ಕೆ ಸಭೆಯನ್ನು ಮುಂದೂಡಿದರು.

## ಕಾರ್ಗಿಲ್ ವಿಜಯೋತ್ಸವ ಆಚರಣೆ ಸಭೆಯ ವರದಿ :

ದಿನಾಂಕ 26-07-2023ರ ಬುಧವಾರಂದು ನಮ್ಮ ಕ್ಲಬ್‌ನ ನೇತೃತ್ವದಲ್ಲಿ ಪುತ್ತೂರಿನ ಆರು ಆರು ರೋಟರಿ ಕ್ಲಬ್‌ಗಳು, ಇನ್ನರ್‌ವ್ಹೀಲ್ ಕ್ಲಬ್, ಕೆ.ಎಸ್.ಆರ್.ಟಿ.ಸಿ. ಪುತ್ತೂರು ಹಾಗೂ ಮಾಜಿ ಸೈನಿಕರ ಸಂಘದ ಸಹಭಾಗಿತ್ವದಲ್ಲಿ '24ನೇ ಕಾರ್ಗಿಲ್ ವಿಜಯ್ ದಿವಸ್'ಅನ್ನು ಪುತ್ತೂರು ಕೋಟಿ ಚೆನ್ನಯ ಬಸ್ ನಿಲ್ದಾಣದ ಆವರಣದಲ್ಲಿ ಆಚರಿಸಲಾಯಿತು. ಕು। ಜೀವಿಕಾ ಕಜೆಯವರು ಪ್ರಾರ್ಥನೆಯನ್ನು ಹಾಡಿದರು. ಸಭೆಯ ಅಧ್ಯಕ್ಷತೆಯನ್ನು ಕ್ಲಬ್ ಅಧ್ಯಕ್ಷೆ ರೊ। ಗ್ರೇಸಿ ಗೋನ್ಸಾಲ್ವೀಸ್‌ರವರು ವಹಿಸಿ ಬಂದಂತಹ ಎಲ್ಲಾ ರೋಟರಿ ಅಧ್ಯಕ್ಷರನ್ನು, ಪದಾಧಿಕಾರಿಗಳನ್ನು ಮತ್ತು ಹಾಜರಿದ್ದ ಎಲ್ಲಾ ಮಾಜಿ ಸೈನಿಕರನ್ನು ಸಭೆಗೆ ಸ್ವಾಗತಿಸಿದರು. ಮುಖ್ಯ ಅತಿಥಿಯಾಗಿ ಮಾಜಿ ನೌಕಾ ಸೇನಾಧಿಕಾರಿ, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಎಂ. ಕೆ. ನಾರಾಯಣ ಭಟ್‌ರವರು ಆಗಮಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಟ್ಯಾಂಕ್ ಪಡೆಯ ಮಾಜಿ ಹವಾಲ್ದಾರ್ ಮೇಜರ್ ಸುಂದರ ಗೌಡ ನಡುಬೈಲು ಕಾರ್ಗಿಲ್ ಯುದ್ಧದ ರೋಚಕ ಕಥೆಯನ್ನು ಹೇಳಿದರು.



ಸಭೆಯಲ್ಲಿ ಕಾರ್ಗಿಲ್ ಯುದ್ಧದಲ್ಲಿ ಪಾಲ್ಗೊಂಡು ಹುತಾತ್ಮರಾದ ಯೋಧರಿಗೆ ಯುದ್ಧ ತೋಪನ್ನು ಉಲ್ಟಾ ಇಡುವುದರೊಂದಿಗೆ ತೋಪಿನ ಕೆಳಗೆ ಹೂಗುಚ್ಛದ ರೀದ್ ಇಟ್ಟು ತೋಪಿನ ಮೇಲೆ ಇಡಲಾದ ಸೈನಿಕರ ಕ್ಯಾಪಿನ ಮೇಲೆ ಅತಿಥಿಗಳು ಪುಷ್ಪಾರ್ಚನೆಗೈಯುವ ಮೂಲಕ ಹುತಾತ್ಮ ಯೋಧರಿಗೆ ಗೌರವ ಸಲ್ಲಿಸಲಾಯಿತು. ಸುಮಾರು 40ಕ್ಕೂ ಮಿಕ್ಕಿ ಮಾಜಿ ಯೋಧರು ಸೇರಿದ್ದು ಒಂದು ಅಭೂತಪೂರ್ವ ಸಮ್ಮಿಲನವಾಗಿತ್ತು.

ಈ ದಿನದ ನೆನಪಿಗಾಗಿ ಪುತ್ತೂರು ಕೋಟಿ ಚೆನ್ನಯ ಬಸ್ ನಿಲ್ದಾಣದಕ್ಕೆ ನಮ್ಮ ಝೋನ್ 4ರ ಅಸಿಸ್ಟೆಂಟ್ ಗವರ್ನರ್ ರೊ। ಲಾರೆನ್ಸ್ ಗೋನ್ಸಾಲ್ವೀಸ್‌ರವರು ಒಂದು ದೊಡ್ಡದಾದ ಗಡಿಯಾರವನ್ನು ಕೊಡುಗೆಯಾಗಿ ಕೆ.ಎಸ್.ಅರ್.ಟಿ.ಸಿ. ಪುತ್ತೂರು ವಿಭಾಗ ಡಿ.ಸಿ. ಜಯಕರ ಶೆಟ್ಟಿಯವರಿಗೆ ನಮ್ಮ ಕ್ಲಬ್‌ನ ಮುಖಾಂತರ ನೀಡಲಾಯಿತು.

ಅಂತಿಮವಾಗಿ ರೋಟರಿ ಕ್ಲಬ್ ಪುತ್ತೂರು ಸೆಂಟ್ರಲ್ ಅಧ್ಯಕ್ಷ ರೊ। ರಾಜೇಶ್ ಬೆಜ್ಜಂಗಳರವರ ವಂದನಾರ್ಪಣೆಯೊಂದಿಗೆ ಹಾಗೂ ರಾಷ್ಟ್ರಗೀತೆ ಹಾಡುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಕ್ಲಬ್ ನ್ಯೂಸ್

**ದಿನಾಂಕ 20–07–2023**ರಂದು ರೋಟರಿ ಕ್ಲಬ್ ಪುತ್ತೂರು ಸ್ವರ್ಣ ಇದರ ಪದಗ್ರಹಣ ಸಮಾರಂಭದಲ್ಲಿ ನಮ್ಮ ಕ್ಲಬ್ ಅಧ್ಯಕ್ಷ, ಕಾರ್ಯದರ್ಶಿ ಸಹಿತ ಹಲವು ಮಂದಿ ಸದಸ್ಯರು ಭಾಗವಹಿಸಿದ್ದರು.



**ದಿನಾಂಕ 21–07–2023**ರಂದು ನಮ್ಮ ಕ್ಲಬ್ ಪ್ರಾಯೋಜಕತ್ವದ ಇಂಟರ್ಯಾಕ್ಟ್ ಕ್ಲಬ್ ಆಫ್ ಸೈಂಟ್ ಫಿಲೋಮಿನಾ ಪಿ.ಯು. ಕಾಲೇಜಿನ ಪದಪ್ರದಾನ ಸಮಾರಂಭವು ಜರಗಿತು. ನಮ್ಮ ಕ್ಲಬ್ ಅಧ್ಯಕ್ಷೆ ರೊ। ಗ್ರೇಸಿ ಗೋನ್ಸಾಲ್ವೀಸ್‌ರವರು ಪದಪ್ರದಾನವನ್ನು ನೆರವೇರಿಸಿದರು. ಮುಖ್ಯ ಅತಿಥಿಯಾಗಿ ಕಾಲೇಜಿನ ಪ್ರಾಂಶುಪಾಲರಾದ ರೆ। ಫಾ। ಅಶೋಕ್ ರಾಯನ್ ಕ್ರಾಸ್ತ, ಅತಿಥಿಗಳಾಗಿ ಅಸಿಸ್ಟೆಂಟ್ ಗವರ್ನರ್ ರೊ। ಲಾರೆನ್ಸ್ ಗೋನ್ಸಾಲ್ವೀಸ್, ಜಿಲ್ಲಾ ಇಂಟರ್ಯಾಕ್ಟ್ ಚಯರ್‌ಮೆನ್ ರೊ। ಮಂಜುನಾಥ ಆಚಾರ್ಯ ಆಗಮಿಸಿದ್ದರು.



**ದಿನಾಂಕ 22–07–2023**ರಂದು ನಮ್ಮ ಕ್ಲಬ್ ಮತ್ತು ರೋಟರಿ ಕ್ಲಬ್ ಪುತ್ತೂರು ಎಲೈಟ್ ನೇತೃತ್ವದಲ್ಲಿ ದ.ಕ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಂಧತ್ವ ನಿವಾರಣಾ ಸಂಸ್ಥೆ ಮಂಗಳೂರು ಸಹಕಾರದೊಂದಿಗೆ 8ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ನೇತ್ರ ಪರೀಕ್ಷೆ ಮತ್ತು ಕನ್ನಡಕ ವಿತರಣಾ ಶಿಬರವು ಸರಕಾರಿ ಪದವಿಪೂರ್ವ ಕಾಲೇಜು, ಪ್ರೌಢ ಶಾಲಾ ವಿಭಾಗ ಕೊಂಬೆಟ್ಟು ಪುತ್ತೂರು ಇಲ್ಲಿ ಜರಗಿತು. ಶಿಬಿರದಲ್ಲಿ 669 ವಿದ್ಯಾರ್ಥಿಗಳ ಕಣ್ಣು ತಪಾಸಣೆ ನಡೆಸಲಾಯಿತು. ಈ ಪೈಕಿ ದೃಷ್ಟಿನ್ಯೂನತೆ ಕಂಡುಬಂದ 57 ವಿದ್ಯಾರ್ಥಿಗಳಿಗೆ ಹೆಚ್ಚಿನ ತಪಾಸಣೆಗೆ ಶಿಫಾರಸು ಮಾಡಲಾಯಿತು.

**ದಿನಾಂಕ 22–07–2023**ರಂದು ರೋಟರಿ ಕ್ಲಬ್ ಸುಬ್ರಹ್ಮಣ್ಯ ಇದರ ಪದಗ್ರಹಣ ಸಮಾರಂಭದಲ್ಲಿ ನಮ್ಮ ಕ್ಲಬ್ ಅಧ್ಯಕ್ಷ, ಕಾರ್ಯದರ್ಶಿ ಸಹಿತ ಹಲವು ಮಂದಿ ಸದಸ್ಯರು ಭಾಗವಹಿಸಿದ್ದರು.

**ದಿನಾಂಕ 30–7–2023**ರಂದು ರೋಟರಿ ಕ್ಲಬ್ ವಿಟ್ಲ ಇಲ್ಲಿ ನಡೆದ 'ಗದ್ದೆಯಲ್ಲೊಂದು ದಿನ' ಕಾರ್ಯಕ್ರಮದಲ್ಲಿ ನಮ್ಮ AG ರೊ। ಲಾರೆನ್ಸ್ ಗೋನ್ಸಾಲ್ವೀಸ್, ಅಧ್ಯಕ್ಷೆ ರೊ। ಗ್ರೇಸಿ ಗೋನ್ಸಾಲ್ವೀಸ್, ರೊ। ಜಯಕುಮಾರ್ ರೈ, ರೊ। ಶಶಿಧರ್ ರೈ, ರೊ। ಶ್ರೀನಿವಾಸ್ ಭಾಗವಹಿಸಿದ್ದರು.

ನಮ್ಮ ಕ್ಲಬ್ ಸದಸ್ಯ ರೊ। ಮೋಹನ್ ಕೆ.ರವರಿಗೆ ಜೆಸಿಐ ಶಂಕರನಾರಾಯಣ ಆತಿಥ್ಯದಲ್ಲಿ ನಡೆದ ಜೆಸಿಐ ಭಾರತದ ವಲಯ 15ರ ಅಭಿವೃದ್ಧಿ ಮತ್ತು ಬೆಳವಣಿಗೆ ಹಾಗೂ ವ್ಯವಹಾರ ಸಮ್ಮೇಳನದಲ್ಲಿ ಪ್ರತಿಷ್ಠಿತ "ಉದ್ಯೋಗರತ್ನ" ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಭಿನಂದನೆಗಳು.

**Today in Rotary** (01-08-2023)
ಸಂಪನ್ಮೂಲ ವ್ಯಕ್ತಿ : ಡಾ। ಕೆ. ಜಯಂತ್ ಕುಮಾರ್
ವಿಷಯ "ಮಾನಸಿಕ ಖಿನ್ನತೆ ಮತ್ತು ಸಮಾಜ"

**Next Week** (08-08-2023)
'ಆಟಿದ ಕೂಟ'

**The Rotary 4 Way Test**

Of the things we think, say, or do
1. Is it the **TRUTH?**
2. Is it **FAIR** to all concerned?
3. Will it **BUILD GOODWILL** and **BETTER FRIENDSHIP?**
4. Will it be **BENEFICIAL** to all concerned?

Edited and Published by Rtn. Manohar K. (9448328237) (for Rotary Club Puttur City
Printed at Prasanna Press, Puttur • Tele : 9886274678 • prasannapress.ptr@gmail.com